Spl. Case No.456/2024
PW. 8, CW.17

ದಿನಾಂಕ : 17-02-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**(ಸಾಕ್ಷಿಯನ್ನು ವಿಡಿಯೋ ಕಾನ್ಫರೆನ್ಸ ಮುಖಾಂತರ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ಸಾಕ್ಷಿಯು ತಾವು ಕಾರ್ಯನಿರ್ವಹಿಸುತ್ತಿರುವ ಅಥಣಿ ಕಚೇರಿಯಿಂದ ತಮ್ಮ ಮೊಬೈಲ್ ಆಪ್ ನಿಂದ ನ್ಯಾಯಾಲಯದ ಗೂಗಲ್ ಮೀಟ್ ಆ್ಯಪ್ ಮೂಲಕ ವಿಚಾರಣೆಗೆ ಹಾಜರಾಗಿರುತ್ತಾರೆ. ಕೋಆರ್ಡಿನೇಟರ ಆಗಿ ಶ್ರೀ.ಇರ್ಫಾನ ಪಟೇಲ, ದ್ವಿತಿಯ ದರ್ಜೆ ಸಹಾಯಕರು ಹಾಜರಾಗಿರುತ್ತಾರೆ. ಸಾಕ್ಷಿಗೆ ನ್ಯಾಯಾಲಯದ ಚಿತ್ರಣ ಸ್ಪಷ್ಟವಾಗಿ ಕಾಣಿಸುತ್ತಿದೆಯೇ ಮತ್ತು ಧ್ವನಿ ಸ್ಪಷ್ಟವಾಗಿ ಕೇಳಿಸುತ್ತಿದೆಯೇ ಎಂದು ಸಾಕ್ಷಿಯಿಂದ ಖಾತರಿಪಡಿಸಿಕೊಂಡು ನ್ಯಾಯಾಲಯದ ಪ್ರಥಮ ದರ್ಜೆ ಸಹಾಯಕರಾದ ಶ್ರೀ.ಎಸ್.ಎಲ್.ದೇವರಮನಿ ರವರನ್ನು ಕೋಆರ್ಡಿನೇಟರ ಆಗಿ ನೇಮಿಸಿಕೊಂಡು ಆರೋಪಿ ಪರ ವಕೀಲರು ಹಾಗೂ ಸರ್ಕಾರಿ ವಕೀಲರ ಉಪಸ್ಥಿತಿಯಲ್ಲಿ ತೆರೆದ ನ್ಯಾಯಾಲಯದಲ್ಲಿ ವಿಚಾರಣೆಯನ್ನು ವಿಡಿಯೋ ಕಾನ್ಫರೆನ್ಸ ಮುಖಾಂತರ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು. ಸಾಕ್ಷಿಯು ತಮ್ಮ ಹತ್ತಿರ ಈ ಪ್ರಕರಣದ ಕಡತವು ಇರುವುದಾಗಿ ನುಡಿಯುತ್ತಾರೆ.)**

(ಆರೋಪಿ ನ್ಯಾಯಾಂಗ ಬಂಧನದಲ್ಲಿದ್ದು ವಿಡಿಯೋ ಕಾನ್ಫರೆನ್ಸ ಮುಖಾಂತರ ಹಿಂಡಲಗಾ ಕಾರಾಗೃಹ, ಬೆಳಗಾವಿಯಿಂದ ವಿಚಾರಣೆಗೆ ಹಾಜರುಪಡಿಸಿಕೊಳ್ಳಲಾಯಿತು. ಆರೋಪಿಗೆ ನ್ಯಾಯಾಲಯದ ಚಿತ್ರಣ ಸ್ಪಷ್ಟವಾಗಿ ಕಾಣಿಸುತ್ತಿದೆಯೇ ಮತ್ತು ಧ್ವನಿ ಸ್ಪಷ್ಟವಾಗಿ ಕೇಳಿಸುತ್ತಿದೆಯೇ ಎಂದು ಆರೋಪಿಯಿಂದ ಖಾತರಿಪಡಿಸಿಕೊಂಡು ವಿಚಾರಣೆಯನ್ನು ವಿಡಿಯೋ ಕಾನ್ಫರೆನ್ಸ ಮುಖಾಂತರ ಆರೋಪಿ ಪರ ವಕೀಲರ ಮತ್ತು ಸರ್ಕಾರಿ ವಕೀಲರ ಸಮಕ್ಷಮ ತೆರೆದ ನ್ಯಾಯಾಲಯದಲ್ಲಿ ತೆಗೆದುಕೊಳ್ಳಲಾಯಿತು.)

**ಮುಂದುವರೆದ ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

4. ಗಾಯಾಳು ಬಸಪ್ಪ ಹನಮಂತಪ್ಪ ಯರಗುದ್ದಿ ಅವರ ಮರಣೋನ್ಮುಖ ಮೂಲ ಹೇಳಿಕೆಯನ್ನು ಸಾಕ್ಷಿ ಗುರುತಿಸಿದ್ದಾರೆ. ಅದನ್ನು ನಿಪಿ-35 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-35 [ಎ] ಎಂದು ಗುರುತಿಸಲಾಯಿತು. ನಿಪಿ-35 ರಲ್ಲಿರುವ

ಕೈಬರವಣಿಗೆ ನಮ್ಮ ಕಚೇರಿಯ ಸಹಾಯಕರದು. ನಿಪಿ–35 ರಲ್ಲಿ ಗಾಯಾಳುವಿನ ಬಲಗೈ ಹೆಬ್ಬಟ್ಟಿನ ಗುರುತು ಇದೆ ಎಂದು ಅದನ್ನು ನಾನು ಗುರುತಿಸಿ ಧೃಡೀಕರಿಸಿ ನನ್ನ ಸಹಿ ಮಾಡಿದ್ದೇನೆ ಎಂದು ಹೇಳಿದ್ದಾರೆ. ಆ ಸಹಿಯನ್ನು ನಿಪಿ–35[ಬಿ] ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಆರೋಪಿಯ ಪರ ಶ್ರೀ.ಎಸ್.ಎನ್.ಪಿ ವಕೀಲರಿಂದ**

ನಿಪಿ–35 ರ ಮೇಲಿರುವ ಹೆಬ್ಬಟ್ಟಿನ ಗುರುತು ಗಾಯಾಳು ಬಸಪ್ಪನವರದೇ ಎಂದು ಗುರುತಿಸಿ ಅದರ ಕೆಳಗೆ ನಾನು ಸಹಿಯನ್ನು ಮಾಡಿರುವುದಿಲ್ಲ. ನಿಪಿ–35 ರ ಮೇಲಿರುವ ಬಲಗೈ ಹೆಬ್ಬಟ್ಟಿನ ಗುರುತು ಗಾಯಾಳು ಬಸಪ್ಪನವರದು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಿಪಿ–35 ನಿಗದಿತ ನಮೂನೆಯಲ್ಲಿ ಇದೆ ಎನ್ನುವುದು ಸರಿ. ನಿಪಿ–35 ರಲ್ಲಿರುವ ಪ್ರಿಂಟಾದ 10 ಪ್ರಶ್ನೆಗಳಿಗೆ ಉತ್ತರವನ್ನು ನಮ್ಮ ಕಚೇರಿಯ ದ್ವಿತಿಯ ದರ್ಜೆ ಸಹಾಯಕರಾದ ರುದ್ರಪ್ಪ ಯಡವನ್ನವರ ಅವರು ತಮ್ಮ ಕೈ ಬರವಣಿಗೆಯಲ್ಲಿ ಬರೆದಿರುತ್ತಾರೆ. ಸದರಿ ರುದ್ರಪ್ಪ ಯಡವನ್ನವರ ತಹಶೀಲ್ದಾರ ಕಚೇರಿಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನುವುದು ಸರಿ. ಆ ಸಮಯದಲ್ಲಿ ನಾನು ತಹಶೀಲ್ದಾರ ಆಗಿ ಆ ಕಚೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರಲಿಲ್ಲ.

ಪ್ರಶ್ನೆಃ ಮರಣೋನ್ಮುಖ ಹೇಳಿಕೆಯನ್ನು ನಿಮಗೆ ನಿಮ್ಮ ಕೈಬರವಣಿಗೆಯಲ್ಲಿ ಬರೆಯಲು ತೊಂದರೆ ಇತ್ತೇ?
ಉತ್ತರಃ ಏನೂ ತೊಂದರೆ ಇರಲಿಲ್ಲ, ಬರೆಯಬಹುದಾಗಿತ್ತು, ಆದರೆ ಬರೆದಿರುವುದಿಲ್ಲ.

2. ನಿಪಿ–35 ರುದ್ರಪ್ಪ ಯಡವನ್ನವರ ಅವರ ಕೈ ಬರವಣಿಗೆಯಲ್ಲಿದೆ ಎಂದು ನಮೂದು ಮಾಡಿಲ್ಲ ಎನ್ನುವುದು ಸರಿ.

3. ಗಾಯಾಳುವಿನ ಮರಣೋನ್ಮುಖ ಹೇಳಿಕೆಯನ್ನು ದಾಖಲಿಸಿಕೊಳ್ಳುವಂತೆ ಪೋಲಿಸರು ನನಗೆ ದಿನಾಂಕಃ 30-05-2024 ರಂದು ಮನವಿ ಮಾಡಿದ್ದರು. ಸದರಿ ಮನವಿಯನ್ನು ನಮ್ಮ ಕಚೇರಿಯ ಗುಮಾಸ್ತರು ದಿನಾಂಕಃ 30-05-2024 ಸ್ವೀಕರಿಸಿದ್ದಾರೆ ಎನ್ನುವುದು ಸರಿ. ಅದರ ಮೇಲೆ ಸ್ವೀಕರಿಸಿದ ಸಮಯವನ್ನು ನಮೂದು ಮಾಡಿಲ್ಲ.

4. ದಿನಾಂಕಃ 01-06-2024 ರಂದು ನಾನು ಕಚೇರಿಗೆ ಹೋದ ನಂತರ ನಮ್ಮ ಕಚೇರಿಯ ಸಿಬ್ಬಂದಿಯವರು ಪೋಲಿಸರು ನೀಡಿದ ಮನವಿಯ ಬಗ್ಗೆ ತಿಳಿಸಿರುತ್ತಾರೆ. ಸಾಮಾನ್ಯವಾಗಿ ಹಿಂದಿನ ದಿನ ಸಂಜೆ ಬಂದ ಪತ್ರಗಳನ್ನು ಮರುದಿನ ಬೆಳಗ್ಗೆ ನಮ್ಮ ಸಿಬ್ಬಂದಿಯವರು ನನ್ನ ಗಮನಕ್ಕೆ ತರುತ್ತಾರೆ, ಆ ಕಾರಣ ಪೋಲಿಸರು ಮಾಡಿದ ಮನವಿಯನ್ನು ನನ್ನ ಗಮನಕ್ಕೆ ತರಲು ತಡವಾದ ಬಗ್ಗೆ ನಾನು ಸಿಬ್ಬಂದಿಯವರನ್ನು ವಿಚಾರಿಸಿರುವುದಿಲ್ಲ.

5. ದಿನಾಂಕಃ 30-05-2024 ರಂದು ನಮ್ಮ ಕಚೇರಿಯ ಗುಮಾಸ್ತರು ಮನವಿಯನ್ನು ಸ್ವೀಕರಿಸಿದ್ದು, ದಿನಾಂಕಃ 01-06-2024 ರಂದು ನಮ್ಮ ಸಿಬ್ಬಂದಿಯವರು ನನ್ನ ಗಮನಕ್ಕೆ ತಂದಿರುತ್ತಾರೆ.

6. ನಿಪಿ-31 ರಲ್ಲಿ ದಿನಾಂಕಃ30-05-2024 ಎಂದು ತಿದ್ದುಪಡಿ ಮಾಡಿ ಬರೆಯಲಾಗಿದೆ ಎನ್ನುವುದಕ್ಕೆ ಸಾಕ್ಷಿ ಆ ರೀತಿ ನನಗೆ ಅನ್ನಿಸುತ್ತಿಲ್ಲ ಎಂದು ಹೇಳಿದ್ದಾರೆ. ಆ ವಿಚಾರದಲ್ಲಿ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

7. ನಿಪಿ–31 ರಲ್ಲಿ ಹಣ್ಣಿಕೇರಿ ಗ್ರಾಮದಲ್ಲಿ ಬಡೆದಾಟದಲ್ಲಿ ಗಾಯ ಹೊಂದಿ ಉಪಚಾರಕ್ಕಾಗಿ ಬೆಳಗಾವಿ ಬಿಮ್ಸ ಆಸ್ಪತ್ರೆಯಲ್ಲಿ ಅದೇ ದಿವಸ ದಾಖಲಾಗಿ ಉಪಚಾರ ಪಡೆದುಕೊಳ್ಳುತ್ತಿದ್ದು ಎಂದು ಬರೆಯಲಾಗಿದೆ ಎನ್ನುವುದು ಸರಿ.

8. ಪೋಲಿಸರು ಮಾಡಿದ ಮನವಿಯ ಬಗ್ಗೆ ನನಗೆ 10:00 ಗಂಟೆಗೆ ಮಾಹಿತಿ ಗೊತ್ತಾಗಿ ನಾನು 11:00 ಗಂಟೆಗೆ ಬಿಮ್ಸ ಆಸ್ಪತ್ರೆ ಬೆಳಗಾವಿಗೆ ಹೋಗಿದ್ದೇನು. ಗಾಯಾಳು ಬಸಪ್ಪ ಯರಗುದ್ದಿ ಅವರನ್ನು ಆಸ್ಪತ್ರೆಯ ವೈಧ್ಯಕೀಯ ಸಿಬ್ಬಂದಿಯವರು ನನಗೆ ತೋರಿಸಿದರು. ಗಾಯಾಳು ಯಾವ ವಾರ್ಡನಲ್ಲಿದ್ದರು ಎಂದು ಈಗ ನನಗೆ ನೆನಪಿಲ್ಲ. ಆ ದಿನ ಗಾಯಾಳುವಿಗೆ ಚಿಕಿತ್ಸೆ ನೀಡುತ್ತಿದ್ದ ವೈಧ್ಯರು ಯಾರು ಎಂದು ಈಗ ನನಗೆ ನೆನಪಿಲ್ಲ.

9. ಗಾಯಾಳು ಹೇಳಿಕೆ ಕೊಡುವ ಸ್ಥಿತಿಯಲ್ಲಿದ್ದಾರೆಯೇ ಅಥವಾ ಇಲ್ಲವೇ ಎನ್ನುವ ಬಗ್ಗೆ ನಾನು ವೈಧ್ಯರನ್ನು ವಿಚಾರಿಸಿ ಆ ಬಗ್ಗೆ ಧೃಡೀಕರಣವನ್ನು ನಾನು ಪಡೆದುಕೊಂಡಿರುವುದಿಲ್ಲ.

10. ನಿಪಿ–35ನ್ನು ದಾಖಲಿಸಿಕೊಳ್ಳುವ ಸಮಯದಲ್ಲಿ ನಾನು, ನನ್ನ ಕಾರ್ಯನಿರ್ವಾಹಕ ಸಿಬ್ಬಂದಿ ಮತ್ತು ವೈಧ್ಯರು ಮಾತ್ರ ಇದ್ದೇವು. ಆ ವೈಧ್ಯರ ಹೆಸರು ಏನು ಎಂದು ನನಗೆ ಈಗ ಹೇಳಲು ಆಗುವುದಿಲ್ಲ. ಗಾಯಾಳುವಿಗೆ ಸಂಬಂಧಪಟ್ಟ ಸಂಬಂಧಿಕರು ಯಾರಾದರು ಇದ್ದರೇ ಎನ್ನುವ ಪ್ರಶ್ನೆಗೆ ಸಾಕ್ಷಿ ಇದ್ದರು ಆದರೆ ಯಾರು ಇದ್ದರು ಎಂದು ನನಗೆ ಈಗ ನೆನಪಿಲ್ಲ ಎಂದು ಹೇಳಿದ್ದಾರೆ.

11. ಪೋಲಿಸರು ನನಗೆ ಗಾಯಾಳುವಿನ ಹೇಳಿಕೆಯನ್ನು ಪಡೆದುಕೊಳ್ಳುವಂತೆ ಮಾಡಿದ ಮನವಿಯೊಂದಿಗೆ ವೈಧ್ಯರು ಗಾಯಾಳುವಿನ ಸ್ಥಿತಿಯ ಬಗ್ಗೆ ವರದಿಯೂ ಸಹ ಇತ್ತು, ಆ ಕಾರಣ ನಾನು ವೈಧ್ಯರಿಂದ ಪ್ರತ್ಯೇಕವಾಗಿ ಗಾಯಾಳುವಿನ ಸ್ಥಿತಿಯ ಬಗ್ಗೆ ಧೃಡೀಕರಣವನ್ನು ಪಡೆದುಕೊಂಡಿರುವುದಿಲ್ಲ.

12. ವೈದ್ಯರು ಗಾಯಾಳುವಿನ ಸ್ಥಿತಿಯ ಬಗ್ಗೆ ನೀಡಿದ ಧೃಡೀಕರಣ ಪತ್ರ ಈಗ ನನ್ನ ಬಳಿ ಇರುವುದಿಲ್ಲ, ಆದರೆ ಅದು ಕಚೇರಿಯ ಕಡತದಲ್ಲಿ ಇದೆ. ಪೋಲಿಸರು ನನಗೆ ನೀಡಿದ ಮನವಿಯ ಪ್ರತಿಯ ಹಿಂಭಾಗದಲ್ಲಿ ವೈದ್ಯರು ನೀಡಿದ ಧೃಡೀಕರಣ ಇತ್ತು.

13. ನಿಪಿ–31 ಪೋಲಿಸರು ನನಗೆ ನೀಡಿದ ಮನವಿ ಪ್ರತಿ ಎನ್ನುವುದು ಸರಿ. ಅದರ ಹಿಂಭಾಗದಲ್ಲಿ ವೈದ್ಯರು ನೀಡಿದ ಧೃಡೀಕರಣ ಇಲ್ಲ ಎನ್ನುವುದು ಸರಿ.

14. ದಿನಾಂಕಃ 30–05–2024 ರಂದು ಆರ್.ಎಮ್.ಓ, ಬಿಮ್ಸ ಬೆಳಗಾವಿ ಇವರಿಗೆ ಪೋಲಿಸರು ನೀಡಿದ ಮನವಿ ಪತ್ರದ ಹಿಂಭಾಗದಲ್ಲಿ ವೈದ್ಯರು ಧೃಡೀಕರಣವನ್ನು ನೀಡಿದ ಬಗ್ಗೆ ನಮೂದು ಇರುತ್ತದೆ, ಸದರಿ ಪ್ರತಿಯನ್ನು ಸಾಕ್ಷಿ ನೋಡಿ ಅದನ್ನೇ ಪೋಲಿಸರು ನನಗೆ ನೀಡಿದ್ದರು ಎಂದು ಗುರುತಿಸಿದ್ದಾರೆ. ಸದರಿ ಆರ್.ಎಮ್.ಓ, ಬಿಮ್ಸ ಬೆಳಗಾವಿ ಇವರಿಗೆ ನೀಡಿದ ಮನವಿ ಪ್ರತಿಯ 2ನೇ ಪುಟದಲ್ಲಿರುವ ಒಕ್ಕಣೆಗಳನ್ನು ನಿಡಿ–1 ಎಂದು ಗುರುತಿಸಲಾಯಿತು.

15. ನಿಡಿ–1 ನ್ನು ನಾನು ನೋಡಿದ್ದರಿಂದ ಗಾಯಾಳುವಿನ ಹೇಳಿಕೆಯನ್ನು ಪಡೆಯಲು ಪ್ರತ್ಯೇಕವಾಗಿ ವೈದ್ಯರಿಂದ ಧೃಡೀಕರಣವನ್ನು ಪುನಃ ಪಡೆದುಕೊಂಡಿರುವುದಿಲ್ಲ.

16. ಮರಣೋನ್ಮುಖ ಹೇಳಿಕೆಯನ್ನು ಪಡೆಯುವ ಸಮಯದಲ್ಲಿ ಯಾವ ಯಾವ ಕ್ರಮಗಳನ್ನು ಕೈಗೊಂಡಿದ್ದೀರಿ ಎನ್ನುವುದಕ್ಕೆ ಸಾಕ್ಷಿಯುಃ– 1. ಚಿಕಿತ್ಸೆ ಪಡೆಯುತಿದ್ದ ಗಾಯಾಳುವಿನ ಬಳಿ ಹೋಗಿ ನಾನು ನನ್ನ ಪರಿಚಯ ಮಾಡಿಕೊಂಡಿರುತ್ತೇನೆ. 2. ಕರ್ತವ್ಯ ನಿರತ ವೈದ್ಯರ ಸಮಕ್ಷಮ ನನ್ನ ಕಾರ್ಯನಿರ್ವಾಹಕ ಸಿಬ್ಬಂದಿ ಹಾಜರಿದ್ದು, ಗಾಯಾಳು ಹೇಳಿದಂತೆ ಬರೆದುಕೊಂಡು ಗಾಯಾಳುವಿನ ಹೆಬ್ಬಟ್ಟಿನ ಗುರುತು ಪಡೆದುಕೊಂಡು ನಾನು ನನ್ನ ಸಹಿಯನ್ನು ಮಾಡಿದ್ದೇನೆ. ಮತ್ತು ಯಾವುದೇ ಕ್ರಮವನ್ನು

ಮಾಡಿರುವುದಿಲ್ಲ.

17. ಗಾಯಾಳುವಿಗೆ ಇದೇ ರೀತಿ ಹೇಳಿಕೆಯನ್ನು ನೀಡುವಂತೆ ಯಾರಾದರೂ ಹೇಳಿಕೊಟ್ಟಿದ್ದಾರೆ ಎನ್ನುವ ಬಗ್ಗೆ ನಾನು ವಿಚಾರಿಸಿದ್ದೇನೆ ಮತ್ತು ಆ ಬಗ್ಗೆ ನಿಪಿ-35 ರ ನಮೂನೆಯಲ್ಲಿಯೂ ಸಹ ಇರುತ್ತದೆ ಎಂದು ಹೇಳುತ್ತಾರೆ. ಈ ವಿಚಾರದಲ್ಲಿ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

18. ನಾನು ಗಾಯಾಳುವಿನ ಹೇಳಿಕೆಯನ್ನು ಪಡೆದುಕೊಳ್ಳುವ ಪೂರ್ವದಲ್ಲಿ ಬೇರೆ ಯಾರಾದರೂ ಗಾಯಾಳುವಿನ ಹೇಳಿಕೆಯನ್ನು ಪಡೆದುಕೊಂಡಿದ್ದ ಬಗ್ಗೆ ನಾನು ವಿಚಾರಿಸಿರುವುದಿಲ್ಲ.

19. ಗಾಯಾಳುವಿಗೆ ಆಗಿದ್ದ ಗಾಯದ ಬಗ್ಗೆ ಆತನು ತನ್ನ ಕುಟುಂಬಸ್ಥರಿಗೆ ಹೇಳಿಕೊಂಡಿದ್ದ ಬಗ್ಗೆ ನಾನು ವಿಚಾರಿಸಿರುವುದಿಲ್ಲ. ನಾನು ಗಾಯಾಳುವಿನ ಹೇಳಿಕೆ ಪಡೆಯುವ ಸಮಯದಲ್ಲಿ ಗಾಯಾಳುವಿನ ಅಣ್ಣ ಫಕೀರಪ್ಪ ಇದ್ದರು.

20. ನಾನು ಗಾಯಾಳುವನ್ನು ನಿಮ್ಮನ್ನು ಯಾರು ಇಲ್ಲಿ ಕರೆ ತಂದರು ಎಂದು ಕೇಳಲಾಗಿ ನನ್ನ ಅಣ್ಣ ಫಕೀರಪ್ಪ ಅಂಬ್ಯುಲೆನ್ಸನಲ್ಲಿ ಕರೆದುಕೊಂಡು ಬಂದನು ಎಂದು ಹೇಳಿದ್ದಾನೆ. ರುದ್ರಪ್ಪ ಎನ್ನುವವರು ಕರೆದುಕೊಂಡು ಬಂದರು ಎಂದು ಹೇಳಿರುವುದಿಲ್ಲ.

21. ನಾನು ಗಾಯಾಳುವಿನ ಹೇಳಿಕೆಯನ್ನು ಬೆಳಗ್ಗೆ 11:00 ರಿಂದ 11:30ಗಂಟೆಯವರೆಗೆ ದಾಖಲಿಸಿಕೊಳ್ಳುವ ಸಮಯದಲ್ಲಿ ಕರ್ತವ್ಯ ನಿರತ ವೈದರು ನನ್ನೊಂದಿಗೆ ಇದ್ದರು.

22. ನಾನು ತಹಶೀಲ್ದಾರ ಆಗಿ ಸೇವೆ ಸಲ್ಲಿಸುವಾಗ ಸುಮಾರು 10-15 ಪ್ರಕರಣಗಳಲ್ಲಿ ಮರಣೋನ್ಮುಖ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ.

23. ಗಾಯಾಳು ಹೇಳಿಕೆಯನ್ನು ನೀಡುವ ಸಮಯದಲ್ಲಿ ಆತನ ಆರೋಗ್ಯದಲ್ಲಿ ಯಾವುದೇ ವ್ಯತ್ಯಾಸಗಳು ಆಗಿರಲಿಲ್ಲ, ಆತ ಸುಸ್ಥಿತಿಯಲ್ಲಿದ್ದನು ಎಂದು ಗಾಯಾಳುವಿನ ಹೇಳಿಕೆ ಮುಗಿದ ನಂತರ ವೈದ್ಯರು ಧೃಡೀಕರಣವನ್ನು ಮಾಡಿರುವುದಿಲ್ಲ.

24. ನಾನು ಗಾಯಾಳುವಿನ ಹೇಳಿಕೆಯನ್ನು ಪಡೆಯುವ ಸಮಯದಲ್ಲಿ ಶಸ್ತ್ರ ಚಿಕಿತ್ಸಾ ವಿಭಾಗದಲ್ಲಿ ಇದ್ದನು ಎಂದು ಸೂಚಿಸುವುದು ಸರಿ. ನಾನು ಗಾಯಾಳುವಿನ ಹೇಳಿಕೆ ಪಡೆಯುವ ಸಮಯದಲ್ಲಿ ಆತನು ಕೃತಕ ಉಸಿರಾಟದ ವ್ಯವಸ್ಥೆಯಲ್ಲಿ ಇದ್ದನು ಎನ್ನುವುದು ಸರಿಯಲ್ಲ.

25. ನಾನು ಗಾಯಾಳುವಿನ ಹೇಳಿಕೆಯನ್ನು ಪಡೆಯುವ ಮೂರು ದಿನಗಳ ಮೊದಲು ಗಾಯಾಳುವಿಗೆ ಹೊಟ್ಟೆಯ ಶಸ್ತ್ರ ಚಿಕಿತ್ಸೆ ಆಗಿತ್ತು ಎನ್ನುವುದಕ್ಕೆ ಸಾಕ್ಷಿಯು ಆ ಬಗ್ಗೆ ನಾನು ಮಾಹಿತಿಯನ್ನು ಪಡೆದಿಲ್ಲ ಎಂದು ಹೇಳಿದ್ದಾರೆ.

26. ಗಾಯಾಳುವಿನ ಹೇಳಿಕೆ ಪಡೆಯುವ ಮೊದಲು ಗಾಯಾಳುವಿಗೆ ನೀಡಲಾಗಿದ್ದ ಅರವಳಿಕೆಯಿಂದ ಅಥವಾ ಸೆಡೆಟಿವ ಟ್ಯಾಬಲೆಟಗಳ ಪರಿಣಾಮದಿಂದ ಹೊರಗೆ ಬಂದಿದ್ದ ಬಗ್ಗೆ ವೈದ್ಯರನ್ನು ವಿಚಾರಿಸಿರುವುದಿಲ್ಲ.

27. ನಾನು ಆಸ್ಪತ್ರೆಗೆ ಭೇಟಿ ನೀಡಿಲ್ಲ, ನಾನು ಗಾಯಾಳುವನ್ನು ಭೇಟಿ ಮಾಡಿಲ್ಲ, ನಿಪಿ–35 ರಂತೆ ಗಾಯಾಳುವಿನ ಹೇಳಿಕೆಯನ್ನು ಪಡೆದುಕೊಂಡಿಲ್ಲ ಎನ್ನುವುದು ಸರಿಯಲ್ಲ. ನಮ್ಮ ಕಚೇರಿಯಲ್ಲಿಯೇ ಕುಳಿತು ನಮ್ಮ ಸಿಬ್ಬಂದಿಯವರಿಂದ ನಿಪಿ–35 ನ್ನು ತಯಾರಿಸಿ ನಾನು ಸಹಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ.

28. ಗಾಯಾಳುವಿನ ಮರಣೋನ್ಮುಖ ಹೇಳಿಕೆಯನ್ನು ಪಡೆದುಕೊಂಡ ನಂತರ ಕೂಡಲೇ ಆ ಹೇಳಿಕೆಯನ್ನು ಸೀಲ ಮಾಡಿ ಸಂಬಂಧಿಸಿದ ಮ್ಯಾಜಿಸ್ಟ್ರೇಟ ಅವರಿಗೆ

ಕಳುಹಿಸಿಕೊಡಬೇಕಾಗುತ್ತದೆ ಎಂದು ಸೂಚಿಸುವುದು ಸರಿ.

29. ಗಾಯಾಳುವಿನ ಮರಣೋನ್ಮುಖ ಹೇಳಿಕೆಯ ಪ್ರತಿಯನ್ನು ನಾನು ಮಾಡಿಸಿರುವುದಿಲ್ಲ. ನಾನು ಪಡೆದ ಗಾಯಾಳುವಿನ ಹೇಳಿಕೆಯನ್ನು ನ್ಯಾಯಾಧೀಶರಿಗೂ ಕಳುಹಿಸಿರುವುದಿಲ್ಲ ಮತ್ತು ತನಿಖಾಧಿಕಾರಿಗಳಿಗೂ ಕಳುಹಿಸಿರುವುದಿಲ್ಲ ಎನ್ನುವುದು ಸರಿ. ಸಾಕ್ಷಿ ಮುಂದುವರೆದು ಗಾಯಾಳುವಿನ ಹೇಳಿಕೆ ಪಡೆದ 4 ದಿನಗಳಿಗೆ ನನಗೆ ವರ್ಗಾವಣೆ ಆಗಿದ್ದರಿಂದ ಮುಂದಿನ ಪ್ರಕ್ರಿಯೆಯನ್ನು ಮಾಡಿರುವುದಿಲ್ಲ ಎಂದು ಹೇಳಿದ್ದಾರೆ.

30. ಗಾಯಾಳುವಿನ ಮರಣೋನ್ಮುಖ ಹೇಳಿಕೆಯನ್ನು ಪಡೆದ ನಂತರ ನಾನು ಅದನ್ನು ಸೀಲ ಮಾಡಿ, ಅದನ್ನು ನಮ್ಮ ಕಚೇರಿ ವಿಷಯ ನಿರ್ವಾಹಕರಾದ ರುದ್ರಪ್ಪ ಯಡವನ್ನನವರಿಗೆ ನೀಡಿದ್ದೇನು. ಗಾಯಾಳುವಿನ ಮರಣೋನ್ಮುಖ ಹೇಳಿಕೆಯನ್ನು ಸೀಲು ಮಾಡಿಲ್ಲ ಮತ್ತು ಪ್ಯಾಕ ಮಾಡಿಲ್ಲ ಎಂದು ಸೂಚಿಸುವುದು ಸರಿಯಲ್ಲ.

31. ಗಾಯಾಳುವಿನ ಮರಣೋನ್ಮುಖ ಹೇಳಿಕೆಯನ್ನು ಪಡೆಯುವ ಪೂರ್ವದಲ್ಲಿ ಮತ್ತು ನಂತರದಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ನಾನು ಪಾಲಿಸಿಲ್ಲ ಎನ್ನುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)

3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಬೆಳಗಾವಿ.